

# ‘ನನ್ನ ಮುಕ್ಕಾಲು ದೇಹದಂತಹ ಅಪ್ಪ

ಕನ್ನಡ ಚಿತ್ರರಂಗ ಕಂಡ ಬೆರಳೆಣಿಕೆ ‘ಬುದ್ಧಿಜೀವಿ ಕಲಾವಿದ’ರಲ್ಲಿ ಒಬ್ಬರಾದ ಟಿ.ಎಸ್. ಲೋಹಿತಾಶ್ವ (ಆಗಸ್ಟ್ 5, 1942 – ನವೆಂಬರ್ 8, 2022), ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದವರು. ಮೇಷ್ಟ್ರುಗಿರಿ ಹಾಗೂ ರಂಗಭೂಮಿಯ ಮೂಲಕ ‘ಕಟ್ಟುವ ಪ್ರಕ್ರಿಯೆ’ಯಲ್ಲಿ ನಿರಂತರವಾಗಿ ತೊಡಗಿಕೊಂಡಿದ್ದ ಅವರಿಗೆ, ಸಿನಿಮಾ ಮಾಧ್ಯಮ ಪ್ರತಿಭೆಯ ಅಭಿವ್ಯಕ್ತಿಗೆ ದೊರಕಿದ ಮತ್ತೊಂದು ಕವಲಾಗಿತ್ತು. ವ್ಯಕ್ತಿತ್ವ ಮತ್ತು ವಿಶಿಷ್ಟ ‘ಧ್ವನಿ’ಯ ಮೂಲಕ ಸಹೃದಯರ ಪ್ರೀತಿ–ಗೌರವಕ್ಕೆ ಪಾತ್ರರು. ಲೋಹಿತಾಶ್ವ ಅವರ ಪುತ್ರ ಹಾಗೂ ಹಿರಿಯ ಕಲಾವಿದ ಶರತ್ ಲೋಹಿತಾಶ್ವ ಅವರ ಈ ಬರಹ, ಅಗಲಿದ ಕಲಾವಿದನ ಹಲವು ಮುಖಗಳನ್ನು ಪರಿಚಯಿಸುವಂತಿದೆ.

■ ನಿರೂಪಣೆ: **ವಿಶಾಖ ಎನ್.**

ಅಪ್ಪನನ್ನು ಬಿಟ್ಟು ನನಗೆ ಬೇರೆ ಯೋಚನೆ ಸಾಧ್ಯವೇ ಇಲ್ಲ. ನನ್ನದೇ ಮುಕ್ಕಾಲು ದೇಹ ಅವರದ್ದಾಗಿತ್ತೇನೊ ಎನಿಸುತ್ತಿದೆ. ಈಗ ಒಂಥರಾ ಖಾಲಿತನ. ಅವರು ನನಗೆ ಎಲ್ಲವೂ ಆಗಿದ್ದರು. ಅವರ ಗೈರುಹಾಜರಿಯನ್ನು ಜೀರ್ಣಿಸಿಕೊಳ್ಳಲು ಆಗುತ್ತಿಲ್ಲ. ಅವರು ಆಕಾರದಲ್ಲಿ ಅಷ್ಟೇ ಅಲ್ಲ, ವ್ಯಕ್ತಿತ್ವದಲ್ಲೂ ಸದಾ ಗಟ್ಟಿ.

ಅಪ್ಪ ಮೇಷ್ಟ್ರಾಗಿದ್ದರೂ ನನಗೆ ಪಾಠ ಹೇಳಲಿಲ್ಲ. ನಟರಾಗಿದ್ದರೂ ಅಭಿನಯಿಸುವುದು ಹೀಗೆ ಎಂದು ಹೇಳಿಕೊಡಲಿಲ್ಲ. ಅವರ ಪಾಡಿಗೆ ಅವರಿದ್ದರು. ಕುಟುಂಬಕ್ಕೆ ಪ್ರಾಶಸ್ತ್ಯ ಕೊಡುತ್ತಿದ್ದರು. ಒಳ್ಳೆಯ ತಂದೆ ಆಗಿದ್ದರು. ಓದು–ಬರಹದ ವಿಚಾರವಾಗಿ ಯಾವತ್ತೂ ಒತ್ತಡ ಹೇರಲಿಲ್ಲ. ಇದನ್ನೇ ಮಾಡು ಎಂದು ತಾಕೀತೂ ಮಾಡಲಿಲ್ಲ. ಸ್ವತಂತ್ರ ಬೆಳವಣಿಗೆಗೆ ಅವರು ಒತ್ತುಕೊಡುತ್ತಿದ್ದರು.

ಅಪ್ಪ ಸಾಹಿತ್ಯ, ಸಂಗೀತ, ಪಾಕಶಾಸ್ತ್ರ, ಬಟ್ಟೆ ಹೊಲೆಯುವುದು, ರಂಗಭೂಮಿ, ಸಿನಿಮಾ ಎಲ್ಲವನ್ನೂ ಹಚ್ಚಿಕೊಂಡಿದ್ದವರು. ಕೊನೆ ಕೊನೆಯಲ್ಲಿ ಅವರಿಗೆ ಪ್ರಕೃತಿಯ ಮೇಲೆ ಇದ್ದಂತಹ ಪ್ರೀತಿಯನ್ನೂ ನಾವು ಕಂಡೆವು. ಕೊನೆಗಾಲದ ಸುಮಾರು ಎಂಟು ವರ್ಷ ಅವರು, ತುಮಕೂರಿನಿಂದ 80 ಕಿ.ಮೀ. ದೂರದ ತೊಂಡೆಗೆರೆ ಎಂಬ ಹಳ್ಳಿಯಲ್ಲಿನ ಜಮೀನಿನಲ್ಲಿ ನೀರಿಲ್ಲದೆಯೂ ಹಸಿರನ್ನು ಅರಳಿಸಿದ್ದರು.

ಅವರು ಬಿಡುವಿದ್ದಾಗ ಅಡುಗೆ ಮಾಡಿ ಬಡಿಸುತ್ತಿದ್ದರು. ಮಾಡಿದ್ದೆಲ್ಲವೂ ಬಹಳ ರುಚಿಕಟ್ಟು. ಏನು ಪದಾರ್ಥ ಸಿಗುತ್ತಿತ್ತೋ ಅಷ್ಟರಲ್ಲೇ ರುಚಿಕಟ್ಟಾಗಿ ಅಡುಗೆ ಮಾಡುವುದು ಅವರಿಗೆ ಸಿದ್ಧಿಸಿತ್ತು. ಅವರು ಬಟ್ಟೆ ಹೊಲೆಯುವುದನ್ನೂ ಪ್ರೀತಿಸುತ್ತಿದ್ದರು. ರಜಾಯಿ ಹೊಲೆಯುತ್ತಿದ್ದರು. ಮಕ್ಕಳಿಗೆ ಪ್ಯಾಂಟು–ಶರ್ಟು ಹೊಲೆದು ಕೊಡುತ್ತಿದ್ದರು. ಇಷ್ಟದ ಬಟ್ಟೆಯನ್ನು ಆರಿಸಿ ತಂದು,